## ಕರ್ನಾಟಕ ಸರ್ಕಾರ

## ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಸಮಗ್ರ ಮಕ್ಕಳ ರಕ್ಷಣಾ ಘಟಕ, ಹಾಸನ.

ಸಂ: ಜಿ.ಸ.ಮ.ರ.ಘ.ಹಾ/ಸು.ಸಂ.ಸಿ.ನೇ/2017-18 ದಿನಾಂಕ: 04-11-2017

### ಪ್ರಕಟಣೆ

**ವಿಷಯ:-** ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ ಮಾದರಿ ನಿಯಮಗಳು-2016ರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಧಾರಣಾ ಸಂಸ್ಥೆಗಳಲ್ಲಿ ಖಾಲಿಯಿರುವ ಶಿಕ್ಷಕರುಗಳನ್ನು ಅರೆಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಸಂದರ್ಶನದ ಮೂಲಕ ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ:-**
1. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ಸೊಸೈಟಿ, ಬೆಂಗಳೂರು ಅವರ ಸುತ್ತೋಲೆ ಸಂ: ಮ.ಮ.ಅ.ಇ.ಪಿ.ಡಿ.ಎಂ.ಅರ್ಹ ಸಂಸ್ಥೆ ಮಾ32/10-11 ದಿನಾಂಕ: 25-05-2012
2. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು. ಇವರ ಪತ್ರ ಸಂ: ಕೆ.ಎಸ್.ಐ.ಸಿ.ಪಿ.ಎಸ್.ಪಿ.ಎಸ್.ಸಿ.ಪಿ.ಕಾ.ಸ/13: ದಿನಾಂಕ: 25-01-2016
3. ಕಛೇರಿ ಟಿಪ್ಪಣಿ ಕಂಡಿಕೆ(9) ದಿನಾಂಕ: 12-08-2017

******************

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿಗಳಿಗನುಗುಣವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಧಾರಣಾ ಸಂಸ್ಥೆಗಳಲ್ಲಿ 8,9 ಮತ್ತು 10ನೇ ತರಗತಿ ಓದುತ್ತಿರುವ ಮಕ್ಕಳಿಗೆ ಭೋದಿಸಲು ಖಾಲಿ ಇರುವ ಅರೆಕಾಲಿಕ ಶಿಕ್ಷಕರ ಹುದ್ದೆಗಳನ್ನು ಹಾಗೂ ಸರ್ಕಾರಿ ಬಾಲಕರ ಬಾಲಮಂದಿರದಲ್ಲಿ ಖಾಲಿ ಇರುವ ದೈಹಿಕ ಮತ್ತು ಯೋಗ ಶಿಕ್ಷಕರ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳಲು ಈ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ ಸಂ | ಹುದ್ದೆಯ ಹೆಸರು | ಹುದ್ದೆಯ ಸಂಖ್ಯೆ | ವಿದ್ಯಾರ್ಹತೆ | ಅನುಭವ | ವಯಸ್ಸು | ಮಾಸಿಕ ಗೌರವ ಧನ | ಷರಾ |
|---|---|---|---|---|---|---|---|
| 1 | ಇಂಗ್ಲೀಷ್ ಮತ್ತು ವಿಜ್ಞಾನ ಶಿಕ್ಷಕರು | 02 ಹುದ್ದೆಗಳು (ಪುರುಷ-1,ಮಹಿಳೆ-1) | ಅಂಗೀಕೃತ ವಿಶ್ವ ವಿದ್ಯಾನಿಲಯದಿಂದ ಬಿ.ಎಸ್ಸಿ (ಸಿ.ಬಿ.ಜೆಡ್) ಹಾಗೂ ಬಿ.ಎಡ್‌ನಲ್ಲಿ ಭೋಧನ ಶಾಸ್ತ್ರವಾಗಿ ವಿಜ್ಞಾನ ವಿಷಯವನ್ನು ಅಭ್ಯಸಿಸಿರಬೇಕು. | ಕನಿಷ್ಠ 02 ವರ್ಷ | ಕನಿಷ್ಠ-18 38 ವರ್ಷ ಮೀರಿರಬಾರದು | 4,000/- | ಸಂಜೆ 07:00 ರಿಂದ 9.00 |
| 2 | ಗಣಿತ ಶಿಕ್ಷಕರು | 02 ಹುದ್ದೆಗಳು (ಪುರುಷ-1,ಮಹಿಳೆ-1) | ಅಂಗೀಕೃತ ವಿಶ್ವ ವಿದ್ಯಾನಿಲಯದಿಂದ ಬಿ.ಎಸ್ಸಿ(ಪಿ.ಸಿ.ಎಂ) ಹಾಗೂ ಬಿ.ಎಡ್‌ನಲ್ಲಿಭೋಧನ ಶಾಸ್ತ್ರವಾಗಿ ಗಣಿತವನ್ನು ಅಭ್ಯಸಿಸಿರಬೇಕು | ಕನಿಷ್ಠ 02 ವರ್ಷ | ಕನಿಷ್ಠ-18 38 ವರ್ಷ ಮೀರಿರಬಾರದು | 4,000/- | ಬೆಳಗ್ಗೆ 07:00 ರಿಂದ 09:00 |

| | | | | | | | |
|---|---|---|---|---|---|---|---|
| 3 | ದೈಹಿಕ/ಯೋಗ ಶಿಕ್ಷಕರು | 01 ಹುದ್ದೆ (ಪುರುಷ) | ಅಂಗೀಕೃತ ವಿಶ್ವ ವಿದ್ಯಾನಿಲಯದಿಂದ ಬ್ಯಾಚುಲರ್ ಪದವಿ ಹಾಗೂ ಡಿಪ್ಲೋಮೋ ಇನ್ ಫಿಸಿಕಲ್ ಎಜುಕೇಶನ್ ಅಥವಾ ಬ್ಯಾಚುಲರ್ ಆಫ್ ಪಿಜಿಕಲ್ ಎಜುಕೇಶನ್ ಆಗಿರಬೇಕು | ಕನಿಷ್ಠ 02 ವರ್ಷ | ಕನಿಷ್ಠ-18 38 ವರ್ಷ ಮೀರಿರಬಾರದು | 4,000/- | 05:30 ರಿಂದ 07:30 |

**<u>ನಿಬಂಧನೆಗಳು:</u>**

1. ಅಭ್ಯರ್ಥಿಗಳು ಪದವಿ/ಬಿ.ಎಡ್ ಪದವಿಯನ್ನು ಅಂಗೀಕೃತ ವಿಶ್ವವಿದ್ಯಾಲಯಗಳಿಂದ ಪಡೆದಿರಬೇಕು.
2. ಆಯ್ಕೆಯಾದ ಅಭ್ಯರ್ಥಿಗಳ ಹುದ್ದೆಯು ಗುತ್ತಿಗೆ ಆಧಾರದ ಮೇಲೆ ನೇರ ಸಂದರ್ಶದ ಹುದ್ದೆಯಾಗಿದ್ದು, ಯಾವುದೇ ಕಾರಣಕ್ಕೂ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಳಿಸುವುದಿಲ್ಲ ಹಾಗೂ ನೇಮಕಗೊಂಡ ಅಭ್ಯರ್ಥಿಯ ಸೇವೆಯು ಸಂಪೂರ್ಣ ತಾತ್ಕಾಲಿಕವಾಗಿರುತ್ತದೆ.
3. ಮೇಲ್ಕಂಡ ಹುದ್ದೆಗಳು ಒಂದು ವರ್ಷಕ್ಕೆ ಮಾತ್ರ ಸೀಮಿತವಾಗಿರುತ್ತದೆ.
4. ಅಭ್ಯರ್ಥಿಗಳ ಆಯ್ಕೆಯಲ್ಲಿ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.
5. ಕನಿಷ್ಠ ಅರ್ಹತೆಗಿಂತ ಹೆಚ್ಚಿನ ಶೈಕ್ಷಣಿಕ ಅರ್ಹತೆ ಹಾಗೂ ಮಕ್ಕಳ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಅನುಭವ ಹಾಗೂ ಸೇವಾ ಮನೋಭಾವ ಆಸಕ್ತಿಯನ್ನು ಪರಿಗಣಿಸಿ ಆದ್ಯತೆ ನೀಡಲಾಗುವುದು.

**<u>ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು</u>**

1. ನಿಗಧಿತ ಅರ್ಜಿ ನಮೂನೆ.
2. ಅರ್ಜಿಯ ಜೊತೆಗೆ ರೂ. 100/- ಗಳ ಡಿ.ಡಿ.ಯನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಹೆಸರಿನಲ್ಲಿ ತೆಗೆದು ಲಗತ್ತಿಸುವುದು.
3. ಜನ್ಮ ದಿನಾಂಕ (ಎಸ್.ಎಸ್.ಎಲ್.ಸಿ ಅಂಕಪಟ್ಟಿ/ಟಿ.ಸಿಯಲ್ಲಿ ನಮೂದಿಸಿದಂತೆ).
4. 3.5 * 4.5 ಅಳತೆಯ ಎರಡು ಭಾವಚಿತ್ರಗಳು, ಒಂದನ್ನು ಅರ್ಜಿಗೆ ಅಂಟಿಸಬೇಕು.
5. ವಾಸಸ್ಥಳ ದೃಢೀಕರಣ ಪತ್ರ ಲಗತ್ತಿಸಿಬೇಕು.
6. ದೃಢೀಕರಿಸಿದ ಶೈಕ್ಷಣಿಕ ಅರ್ಹತೆಯ ಪ್ರಮಾಣಪತ್ರಗಳು ಮತ್ತು ಅಂಕಪಟ್ಟಿಗಳು.
7. ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ ಅನುಭವದ ದೃಢೀಕರಿಸಿದ ಪ್ರಮಾಣಪತ್ರಗಳು.

**ಭರ್ತಿ ಮಾಡಿದ ಅರ್ಜಿಯನ್ನು ಎಲ್ಲಾ ಮಾಹಿತಿಯೊಂದಿಗೆ ದಿನಾಂಕ: 03-01-2018ರ ಒಳಗಡೆ ಜಿಲ್ಲಾ ಸಮಗ್ರ ಮಕ್ಕಳ ರಕ್ಷಣಾ ಕಛೇರಿ, ಜಿ.ಡಿ.ಎಂ ಬಿಲ್ಡಿಂಗ್, 2ನೇ ಕ್ರಾಸ್, ರಕ್ಷಣಾ ಪುರ, ಹಾಸನ ಇಲ್ಲಿಗೆ ಸಂಜೆ 5:00ರೊಳಗಡೆ ಸಲ್ಲಿಸುವುದು.**

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಸಮಗ್ರ ಮಕ್ಕಳ ರಕ್ಷಣಾ ಘಟಕ, ಜಿ.ಡಿ.ಎಂ ಬಿಲ್ಡಿಂಗ್, 2ನೇ ಅಡ್ಡ ರಸ್ತೆ, ರಕ್ಷಣಾ ಪುರ, ಹಾಸನ-573201 ಇವರನ್ನು ಸಂಪರ್ಕಿಸಬಹುದಾದ **ದೂರವಾಣಿ ಸಂಖ್ಯೆ:** 08172-231360 ಅಥವಾ **ವೆಬ್ ಸೈಟ್** <u>**WWW.hassan.nic.in**</u> ನಲ್ಲಿ ಪಡೆಯಬಹುದು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಸಮಗ್ರ ಮಕ್ಕಳ ರಕ್ಷಣಾ ಘಟಕ
ಹಾಸನ.